## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 31-08-2022

### ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 155/2022 ಕಲಂ 454, 457, 380 ಐಪಿಸಿ :-

ದಿನಾಂಕ 30/08/2022 ರಂದು 2015 ಗಂಟೆಗೆ ಫಿರ್ಯಾದುದಾರರಾದ ಶ್ರೀಮತಿ ಜನಾಬಾಯಿ ಗಂಡ ರಮೇಶ ಮಾನಕಾರಿ ವಯ:42 ವರ್ಷ ಜಾತಿ:ಮರಾಠ ಉ:ಶಿಕ್ಷಕಿ ಸಾ/ನಿಟ್ಟೂರ (ಬಿ) ತಾ/ಭಾಲ್ಕಿ ಸಧ್ಯ ರ ಜ್ಯೋತಿ ಕಾಲೋನಿ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೇನಂದರೆ, ಸುಮಾರು 5 ವರ್ಷಗಳಿಂದ ಬೀದರ ನಗರದ ಜ್ಯೋತಿ ಕಾಲೋನಿಯಲ್ಲಿ ಶ್ರೀ. ನಂದಕಿಶೋರ ಜಾಗಿರದಾರ ಇವರ ಮನೆಯಲ್ಲಿ ಕುಟುಂಬದೊಂದಿಗೆ ಬಾಡಿಗೆಯಿಂದ ವಾಸವಿದ್ದು, ದಿನಾಂಕ 25/08/2022 ರಂದು ಮನೆಗೆ ಕೀಲಿ ಹಾಕಿ ಸಾವಳಿ ಗ್ರಾಮಕ್ಕೆ ಹೋಗಿರುತ್ತಾರೆ ಮನೆಯ ಮಾಲಿಕರಾದ ಶ್ರೀ.ನಂದಕಿಶೋರ ರವರು ದಿನಾಂಕ 29/08/2022 ರಂದು ರಾತ್ರಿ 10:00 ಪಿಎಮ್. ಗಂಟೆಗೆ ಮನೆಗೆ ಬೀಗ ಹಾಕಿದನ್ನು ನೋಡಿದ್ದು, ದಿನಾಂಕ 30/08/2022 ರಂದು ಮಧ್ಯಾಹ್ನ 12:30 ಪಿ.ಎಮ್. ಗಂಟೆಗೆ ಮಾಲಿಕರು ಬಾಡಿಗೆ ಮನೆಗೆ ಹಾಕಿದ ಬಾಗಿಲಿನ ಕೊಂಡಿ ಮುರಿದಿದ್ದು, ಬಾಗಿಲು ತೆರೆದಿರುತ್ತದೆ ಎಂದು ದೂರವಾಣಿ ಮುಖಾಂತರ ತಿಳಿಸಿದ್ದು, ಕೂಡಲೆ ಬೀದರಕ್ಕೆ ಬಂದು ನಮ್ಮ ಬಾಡಿಗೆ ಮನೆಯಲ್ಲಿ ನೋಡಲಾಗಿ ಮನೆಯ ಬಾಗಿಲಿನ ಕೊಂಡಿ ಮುರಿದಿದ್ದು, ಮನೆಯಲ್ಲಿ ಹೋಗಿ ನೋಡಲಾಗಿ ಅಲಮಾರೆ ತೆರೆದಿದ್ದು, ಅಲಮಾರೆಯಲ್ಲಿ ಇಟ್ಟಿದ್ದ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಅಲಮಾರೆಯಲ್ಲಿ ಇಟ್ಟಿರುವ 229 ಗ್ರಾಂ. ತೂಕದ ಬಂಗಾರದ ಆಭರಣಗಳು ಅ.ಕಿ.9,16,000/-ರೂ. ನೇದವುಗಳು ಅಲಮಾರೆಯಲ್ಲಿ ಇರಲಿಲ್ಲ. 1)50 ಗ್ರಾಂ. ತೂಕದ ಒಂದು ಗಂಠನ ಸರ ಅ.ಕಿ.2,00,000/-ರೂ. 2)40 ಗ್ರಾಂ. ತೂಕದ ಒಂದು ನೆಕ್ಲೆಸ್ ಅ.ಕಿ.1,60,000/-ರೂ. 3)50 ಗ್ರಾಂ. ತೂಕದ ನಾಲ್ಕು ಬಳೆಗಳು ಅ.ಕಿ.2,00,000/-ರೂ. 4)40 ಗ್ರಾಂ. ತೂಕದ ನಾಲ್ಕು ಪಾಟಲಿಗಳು.ಅ.ಕಿ.1,60,000/-ರೂ. 5)10 ಗ್ರಾಂ. ತೂಕದ ಎರಡು ಕಿವಿಯ ಝುಮಕಾಗಳು ಅ.ಕಿ.40,000/-ರೂ. 6)28 ಗ್ರಾಂ. ತೂಕದ ನಾಲ್ಕು ಕಿವಿಯ ಝುಮಕಾಗಳು ಅ.ಕಿ.1,12,000/-ರೂ. 7)4 ಗ್ರಾಂ. ತೂಕದ ಹಸಿರು ಹಳ್ಳವುಳ್ಳ ಒಂದು ಬೆರಳಲ್ಲಿಯ ಉಂಗುರ ಅ.ಕಿ.16,000/-ರೂ. 8)3 ಗ್ರಾಂ. ತೂಕದ ಮೂರು ಬೆರಳಲ್ಲಿಯ ಉಂಗುರಗಳು ಅ.ಕಿ.12,000/-ರೂ. 9)4 ಗ್ರಾಂ. ತೂಕದ ಕಿವಿಗೆ ಹಾಕುವ ಚೈನ ಅ.ಕಿ.16,000/-ರೂ. ಹೀಗೆ ಒಟ್ಟು 229 ಗ್ರಾಂ.ತೂಕದ ಬಂಗಾರದ ಆಭರಣಗಳು ಅ.ಕಿ.9,16,000/-ರೂ. ನೇದನ್ನು ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ ಅಪರಾಧ ಸಂಖ್ಯೆ 134/2022 ಕಲಂ 457. 380 ಐಪಿಸಿ :-

ದಿನಾಂಕ 30/08/2022 ರಂದು 1800 ಗಂಟೆಗೆ ಫಿರ್ಯಾದಿ ರಾಜಶೇಖರ ತಂದೆ ಶಾಂತಗೌಡ ಪಾಟೀಲ ವಯ : 45 ವರ್ಷ ಜಾ: ಲಿಂಗಾಯತ ಉ: ಖಾಸಗಿ ಕೆಲಸ ಸಾ: ಪ್ಲಾಟ ನಂ. 11 ಹಳೆ ಆದರ್ಶ ಕಾಲೋನಿ ಸಾಯಿಬಾಬಾ ಮಂದಿರ ಎದುರಗಡೆ ಬೀದರ ರವರು ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರು ನೀಡಿದ ಸಾರಾಂಶವೆನಂದರೆ ಇವರು 03 ವರ್ಷಗಳಿಂದ ಶ್ರೀ ಮುರಲಿಧರ ರೆಡ್ಡಿ ರವರ ಮನೆಯಲ್ಲಿ ಬಾಡಿಗೆಯಿಂದ ಸಹ ಕುಟುಂಬದೊಂದಿಗೆ ವಾಸವಾಗಿರುತ್ತಾರೆ ಹಿಗಿರುವಲ್ಲಿ ದಿನಾಂಕ 30/08/2022 ರಂದು ರಾತ್ರಿ 0100 ಗಂಟೆಗೆ ನಾನು ಮತ್ತು ಕುಟುಂಬ ಸದಸ್ಯರು ಊಟಮಾಡಿ ಮಲಗಿ ಕೊಂಡಿದ್ದು ಮುಂಜಾನೆ ಅಂದಾಜು 0500 ಗಂಟೆಗೆ ನಮ್ಮ ಮನೆಯ ಅಡುಗೆ ಮನೆಯ ಕೊಂಡಿ ಮುರಿದು ಯಾರೋ ಕಳ್ಳರು ಮನೆಯಲ್ಲಿ ಪ್ರವೇಶಿಸಿ ಅಡುಗೆ ಮನೆಯಲ್ಲಿದ್ದ ಅಲಮಾರಾ ದಲ್ಲಿಟಿದ ನಗದು ಹಣ 50000=00 ರೂ ಮತ್ತು 05 ಗ್ರಾಮ ಬಂಗಾರ ಉಂಗುರ ಅಂ.ಕಿ. 25000=00 ರೂ ಹಿಗೆ ಒಟ್ಟು 75000=00 ರೂ ಬೆಲೆ ಬಾಳುವ ಬಂಗಾರ ಮತ್ತು ನಗದು ಹಣ ಅಲಮಾರಿ ಕೀಲಿ ಮುರಿದು ಕಳವು ಮಾಡಿಕೊಂಡು ಹೊಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಬೀದರ ಗ್ರಾಮೀಣ ಪೋಲೀಸ್ ಠಾಣ ಅಪರಾಧ ಸಂಖ್ಯೆ 58/2022 ಕಲಂ 379 ಐಪಿಸಿ :-

ದಿನಾಂಕ 30/08/2022 ರಂದು 1800 ಗಂಟೆಗೆ ಸಂಜೀವಕುಮಾರ ತಂದೆ ಅಣ್ಣೆಪ್ಪಾ ಜೆಟಗೊಂಡ್ ವಯ-41 ಉ॥ ಶಾಖಾಧಿಕಾರಿ ಜೆಸ್ಕಾಂ ಕಮತಾಣಾ ರವರು ಠಾಣೆಗೆ ಹಾಜರಾಗಿ ಒಂದು ಲಿಖೀತ ದೂರು ನೀಡಿದ್ದು ಸಾರಾಂಶವೆನೆಂದರೆ ದಿನಾಂಕ 20/08/2022 ರಂದು ಮುಂಜಾನೆ 1000 ಗಂಟೆಗೆ ಭಾಸ್ಕರ ತಂದೆ ಶಾಮಣ್ಣಾ ಸಾ॥ ಬೆಳ್ಳೂರಾ ಎಂಬುವವರು ಫೋನ ಮಾಡಿ ನಮ್ಮ ಹೋಲದಲ್ಲಿನ ವಿದ್ಯುತ ಕಂಬಕ್ಕೆ ಅಳವಡಿಸಿದ ಎರಡು ವಿದ್ಯುತ ಕಂಬದ ತಂತಿಯನ್ನು ಕಳುವು ಆಗಿರುತ್ತದೆ ಅಂತ ತಿಳಿಸಿದ ಮೇರೆಗೆ ನಾನು ಮತ್ತು ನಮ್ಮ ಲೈನಮ್ಯಾನ ಮ್ಯೆನೊದ್ದಿನ ರವರು ಘಟನೆ ಸ್ಥಳಕ್ಕೆ ಹೋಗಿ ನೋಡಲಾಗಿ ಬೆಳ್ಳೂರಾ ಶಿವಾರದಲ್ಲಿನ ಭಾಸ್ಕರ ರವರ ಹೋಲದಲ್ಲಿ 2 ವಿದ್ಯುತ ಕಂಬಕ್ಕೆ ಅಳವಡಿಸಿದ ವಿದ್ಯುತ ತಂತಿ ಕಳುವು ಮಾಡಿಕೊಂಡು ಹೋಗಿದ್ದು ಕಂಡು ಬಂದಿರುತ್ತದೆ ಕಳವು ಮಾಡಿಕೊಂಡು ಹೋದ ವಿದ್ಯುತ ತಂತಿಯ ಅಂದಾಜು ಕಿಮತ್ತು ರು 10000/-ಆಗುತ್ತದೆ. ಈ ಘಟನೆ ದಿನಾಂಕ 19/08/2022 20/08/2022 ರ ರಾತ್ರಿ ವೇಳೆಯಲ್ಲಿ ಯಾರೋ ಅಪರಿಚಿತ ಕಳ್ಳರು 2 ವಿದ್ಯುತ ಕಂಬಕ್ಕೆ ಅಳವಡಿಸಿದ ವಿದ್ಯುತ ತಂತಿ ಕಳುವು ಮಾಡಿಕೊಂಡು ಹೋಗಿದ್ದು ಇರುತ್ತದೆ. ಕಳುವಾದ ತಂತಿಯನ್ನು ಹುಡುಕಾಡಟಲು ಹೋಗಿದರಿಂದ ಮತ್ತು ನಮ್ಮ ಮೇಲಾಧಿಕಾರಿಗಳಿಗೆ ವಿಚಾರಿಸಿ ಠಾಣೆಗೆ ಬಂದು ದೂರು ಕೋಡಲು ತಡವಾಗಿರುತ್ತದೆ. ಅಂತಾ ನೀಡಿದ ದೂರಿನ ಮೇರೆಗ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.